# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.814/2024

| | | |
|---|---|---|
| ಸಾಕ್ಷಿದಾರರ ಹೆಸರು | ಃ ರಾಜು | ಸಿ.ಡಬ್ಲ್ಯೂ ಃ 01 |
| ತಂದೆ ಹೆಸರು | ಃ ಬಸಪ್ಪ | ಪಿ.ಡಬ್ಲ್ಯೂ ಃ 01 |
| ವಯಸ್ಸು | ಃ 29 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಯಾಳಗಿ | |

**ಸಾಕ್ಷಿಗೆ ಇಂದು ದಿನಾಂಕಃ 25.10.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-6 ಮತ್ತು 7 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತ ಮತ್ತು ನನಗೆ ಬಾಯಿಮಾತಿನ ಗಲಾಟೆ ಆಗಿರುತ್ತದೆ. ಆ ಕುರಿತು ನಾನು ಪೋಲೀಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಯಾವುದೇ ಮರುಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

**ಪಾಟೀ ಸವಾಲು ಃ ಅಭಿಯೊಜನೆ ಪರ ಸ.ಸ.ರವರಿಂದಃ**

ದಿನಾಂಕ 03-03-2020 ರಂದು ಮದ್ಯಾಹ್ನ 1.30 ರ ಸುಮಾರಿಗೆ ಓಪೋ ಕಂಪನಿಯ ಮೊಬೈಲ್ ನಂಬರ ಐ.ಎಂ.ಇ.ಐ ನಂ.869905042511998 ಮತ್ತು ಐ.ಎಂ.ಇ.ಐ ನಂ.869905042511980 ನೇದ್ದರಲ್ಲಿ ನನ್ನ ಖಾತೆಯ ಮೊಬೈಲ್ ಇಸ್ಟಾಗ್ರಾಂ ಮತ್ತು ಸ್ಟೆಟಸನಲ್ಲಿ ರಾಷ್ಟನಾಯಕ ಡಾ.ಬಾಬಾಸಾಹೇಬ ಅಂಬೇಡ್ಕರ ಭಾವಚಿತ್ರಕ್ಕೆ ಅಪಮಾನ ಮಾಡಿ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಪ್ರಸಾರ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ

ಪೋಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಚಾಸಾ-6 ಮತ್ತು 7 ರವರು ಸೇರಿ ಮೋಬೈಲ ನಂ.7349154714 ನೇದ್ದರಲ್ಲಿ ಇನ್ಸಗ್ರಾಂ ಮತ್ತು ಸ್ಟೇಟಸ್ ನೋಡುತ್ತಿರುವಾಗ ನಮ್ಮ ಗ್ರಾಮದ ಆರೋಪಿತನು ತನ್ನ ಮೊಬೈಲನ ಇನ್ಸಗ್ರಾಂ ಮತ್ತು ಸ್ಟೆಟಸನಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಭಾವಚಿತ್ರಕ್ಕೆ ಅವಳಹೇನ ಮಾಡಿ, ಅಪಮಾನ ಮಾಡಿಲಾಗಿದೆ ಎಂದು ಪೋಲೀಸರ ಮುಂದೆ ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ಆರೋಪಿತರೊಂದಿಗೆ ರಾಜೀ ಆಗಿದ್ದೇನೆ ಎಂದರೆ ಸರಿ. ಆ ಕಾರಣಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.